ಶನಿಶಾಂತಿ ಮಾಡಿಸಲು ಕಿಕ್ಕಿರಿದು ಸೇರಿದ ಜನಸ್ತೋಮವನ್ನು ಕಂಡಾಗ. ಅಪ್ಪನಾದ ರವಿಯನ್ನು ಕಂಡರೆ ಶನಿಗೆ ಪರಮ ವೈರ ಎನ್ನುವ ಮಾತನ್ನು ನಂಬುವುದಾದರೆ ಅಪ್ಪನನ್ನು ಕಂಡರಾಗದವನು ದುಷ್ಟ ಎಂದು ಸಾರಾಸಗಟಾಗಿ ತೀರ್ಮಾನ ಮಾಡಲಾಗಿದೆಯೇ? ಯಾರು ಬಲ್ಲ? ನವಗ್ರಹ ದೇವಸ್ಥಾನಗಳು ಇರುವೆಡೆಗಳಲ್ಲೆಲ್ಲಾ ರವಿಯನ್ನು ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಿದರೆ ಶನಿಯನ್ನು ಪಶ್ಚಿಮಾಭಿಮುಖವಾಗಿ ಪ್ರತಿಷ್ಠಾಪಿಸುತ್ತಾರೆ ಎನ್ನುವುದು ಟೀವಿ ಚಾನಲ್‌ಗಳಲ್ಲಿ ಕೇಳಿ ಅರಗಿಸಿಕೊಂಡ ಮಾಹಿತಿ. ಒಬ್ಬನ ಮುಖ ಅತ್ತ, ಇನ್ನೊಬ್ಬನ ಮುಖ ಇತ್ತ.

ಕೂತಲ್ಲಿ ಕೂರದೆ ಸದಾ ಸಂಚಾರ ಮಾಡುವವರ ಕುರಿತು ಮಲೆನಾಡಿನ ಕಡೆ 'ಅವನ ಕಾಲಿನಲ್ಲಿ ಚಕ್ರ ಇದೆ' ಎನ್ನುವ ಹೇಳಿಕೆ ಇರುವಂತೆ 'ನಿಂಗೇನು ಕಾಲುಶನೀನಾ?' ಎನ್ನುವ ವ್ಯಂಗೋಕ್ತಿ ಕೂಡಾ ವಾಡಿಕೆಯಲ್ಲಿದೆ. ಹೊರಗೆ ಆಟವಾಡಿ ದಣಿದು ಮುಸ್ಸಂಜೆ ಹೊತ್ತಿಗೆ ಮನೆ ಸೇರಿಕೊಳ್ಳುವ ಮಕ್ಕಳು ಹಿಮ್ಮಡಿ ನೆನೆಯುವಂತೆ ಪೂರ್ತಿ ಕಾಲು ತೊಳೆದುಕೊಂಡು ಒಳಗೆ ಬರದೆ ಕಣ್ಣಟ್ಟಿನ ಕೆಲಸ ಮುಗಿಸಿಕೊಂಡು ಒಳಗೆ ಬಂದರೆ ಅಮ್ಮನಾದವಳು ತರಾಟೆಗೆ ತೆಗೆದುಕೊಳ್ಳುವ ಕಾಲ ಇತ್ತು. ಹಿಮ್ಮಡಿ ನೆನೆಯುವಂತೆ ಕಾಲು ತೊಳೆದುಕೊಳ್ಳದಿದ್ದರೆ ಶನಿ ಹಿಮ್ಮಡಿಯ ಮೂಲಕ ದೇಹ ಸೇರಿಕೊಳ್ಳುತ್ತಾನಂತೆ. ಇಂತಾ ಸಂದರ್ಭಕ್ಕೋಸ್ಕರ ಅವನು ಕಾದು ಕೂತಿರುತ್ತಾನಂತೆ. ಮಕ್ಕಳಿಗೆ ಸದ್ಬುದ್ಧಿ ಕಲಿಸಲು ಇಂತಾ ಅನೇಕ ಹೇಳಿಕೆಗಳು ಚಾಲ್ತಿಯಲ್ಲಿದ್ದಿರಬಹುದು. ಬಿಡಿ ಈ ವಿಷಯ. ಒಂದು ಮಾತು ತಮ್ಮೆಲ್ಲರಿಗೂ ಗೊತ್ತಿದ್ದಿರಬಹುದು. ಅಧಿಕಾರಸ್ಥಾನದಲ್ಲಿರುವವರಿಗಿಂತಾ ಅವರ ಸುತ್ತಮುತ್ತಲಿರುವ ಚೇಲಾಗಳು, ಕೈಕೆಳಗಿನವರು, ಹೆಚ್ಚಿನ ಜಬರ್ದಸ್ತು ತೋರಿಸುತ್ತಾರೆ ಎನ್ನುವುದು ಅನುಭವದ ಮಾತು. ಜನ ಅಂತವರಿಗೆ ಹೆಚ್ಚು ಅಂಜಿಕೊಂಡು ನಡೆಯುತ್ತಾರೆ. ಶನಿಮಹಾರಾಯನ ವಿಷಯದಲ್ಲೂ ಈ ಮಾತು ಸತ್ಯವಾ? ನಮ್ಮಲ್ಲಿರುವ ಗುಣಗಳನ್ನೇ ನಾವು ದೇವಾನುದೇವತೆಗಳಲ್ಲೂ ಆರೋಪಿಸುವಂತವರು ತಾನೇ? ಶನಿಯ ವಾಹನವೆಂದು ಬಿಂಬಿಸಲ್ಪಟ್ಟಿರುವ ಕಾಗೆಯ ಕುರಿತು ಜನಕ್ಕೆ ಶನಿಯ ಕುರಿತಾಗಿ ಇರುವುದಕ್ಕಿಂತಾ ಹೆಚ್ಚಿನ ಅಂಜಿಕೆ. ಪಾಪದ ಕಾಗೆ ಒಂದಗುಳ ಕಂಡರೆ ಬಳಗವನ್ನೆಲ್ಲಾ ಕೂಗಿ ಕರೆದು ಹಂಚಿ ಉಣ್ಣುವ ಉದಾರ ಸ್ವಭಾವದ್ದಾಗಿದ್ದರೂ ಕಾಗೆ ಅಂದರೆ ಅಪಶಕುನ ಎನ್ನುವ ಭಾವನೆ ಸಾಮಾನ್ಯ ಜನರಲ್ಲಿ ರಕ್ತಗತವಾಗಿಬಿಟ್ಟಿದೆ. ಹಾದಿ ತಪ್ಪಿ, ಬೀದಿ ತಪ್ಪಿ, ಕಾಗೆ ಮನೆಯೊಳಗೇನಾದರೂ ಬಂದುಗಿಂದರೆ ಹೃದಯಬಡಿತ ಸ್ತಬ್ಧವಾಗಿಬಿಡುವಂತಾ ಅಪಶಕುನದ ಭಾವದಿಂದ ಜನ ಕಂಗಾಲಾಗಿಬಿಡುತ್ತಾರೆ. ಶಾಂತಿ ಮಾಡಿಸಿ ಸಮಾಧಾನ ಕಂಡುಕೊಳ್ಳುತ್ತಾರೆ.

**ಗ್ರಹಗಳು ತಾವಿರುವ ರಾಶಿಯಿಂದ ಮುಂದಿನ ಮನೆಗೆ ಅಡಿ ಇಟ್ಟಾಗ ಯಾವ್ಯಾವ ರಾಶಿಯವರಿಗೆ ತೊಂದರೆ, ತಾಪತ್ರಯ ಅಮರಿಕೊಳ್ಳುತ್ತದೋ ಆಯಾ ರಾಶಿಯವರಿಗೆ ಸಾಮೂಹಿಕ ಸಂಕಲ್ಪ ಮಾಡಿಸಿ ಶಾಂತಿ ಮಾಡಿಸುವುದು ದೇವಸ್ಥಾನಗಳಲ್ಲಿ ಮಾಮೂಲಾಗಿದೆ.**